# ಉಪನಿಷತ್ತುಗಳ ಅನುಷ್ಠಾನಪರತೆ

ಸ್ವಾಮಿ ಸೋಮನಾಥಾನಂದ

### ಅನುಷ್ಠಾನದ ಸಾಧ್ಯತೆ

ಉಪನಿಷತ್ತಿನ ಗಹನ ತತ್ತ್ವಗಳು ಅನುಷ್ಠಾನಪ್ರಧಾನವಾದವು. ಅವು ಮೊದಲು ಅನುಷ್ಠಾನವಾಗಿ ಅನಂತರ ಒಂದು ಸಿದ್ಧಾಂತವಾದಂಥವು. ಅನೇಕ ವೇಳೆ ನಾವು, ವೇದಾಂತವನ್ನು ಅನುಷ್ಠಾನಕ್ಕೆ ತರಲು ಅಸಾಧ್ಯ; ಇದು ಪ್ರಪಂಚದ ಹವ್ಯಾಸವಿಲ್ಲದವರಿಗೆ ಸರಿ; ಗಡಿಬಿಡಿಯಲ್ಲಿರುವವರಿಗೆ ಅಸಾಧ್ಯ ಎಂದು ಟೀಕಿಸುವೆವು. ಆದರೆ ಉಪನಿಷತ್ತು ಹುಟ್ಟಿದ್ದೆ, ಜಗದ ಚಟುವಟಿಕೆಯ ಸುಳಿಯಲ್ಲಿ ಎಲ್ಲರಿಗಿಂತ ಹೆಚ್ಚು ಸಿಕ್ಕಿದ್ದವರಿಂದ ಎಂದರೆ ನಮಗೆ ಆಶ್ಚರ್ಯವಾಗುವುದು.

ಉಪನಿಷತ್ತುಗಳಲ್ಲಿ ಬರುವ ಒಂದು ಕಥೆ ಇದು. ಶ್ವೇತಕೇತು ಮತ್ತು ಅವನ ತಂದೆ ಇಬ್ಬರೂ ಬ್ರಹ್ಮನಿಷ್ಠರಾಗಿದ್ದರು. ಅವರಿಬ್ಬರೂ **ಪ್ರವಾಹಣ ಜಾವಲಿ** ಎಂಬ ಪಾಂಚಾಲ ರಾಜನ ಬಳಿಗೆ ಬಂದು ಅವನನ್ನು ಪ್ರಶ್ನಿಸಿದರು. ಆಗ ಆ ರಾಜನು, "ಇದುವರೆಗೆ ಈ ವಿದ್ಯೆ ಬ್ರಾಹ್ಮಣರಿಗೆ ಗೊತ್ತಿರಲಿಲ್ಲ. ಹಿಂದೆ ಎಲ್ಲ ಲೋಕಗಳಲ್ಲಿಯೂ ಈ ವಿದ್ಯೆಯ ಅನುಶಾಸನವು ಕ್ಷತ್ರಿಯರಿಗೇ ಸೇರಿತ್ತು" ಎಂದು ತಿಳಿಸಿ ಬಳಿಕ ಅವರಿಗೆ ಉಪದೇಶ ಮಾಡಿದನೆಂದು ಛಾಂದೋಗ್ಯ ಉಪನಿಷತ್ತು ಹೇಳುವುದು. ಆಗಿನ ಕಾಲದಲ್ಲಿ ರಾಜ ನಿರಂಕುಶಪ್ರಭು. ಅವನು ರಾಜ್ಯವನ್ನು ಆಳಬೇಕಾಗಿತ್ತು, ನ್ಯಾಯಾನ್ಯಾಯಗಳನ್ನು ವಿಚಾರಿಸಬೇಕಾಗಿತ್ತು. ಇಂಥ ರಾಜರಿಗೆ ಉಪನಿಷತ್ತಿನಲ್ಲಿ ಬರುವ ಸತ್ಯವನ್ನು ಚಿಂತಿಸಲು ಅವಕಾಶವಿತ್ತು; ಅದನ್ನು ಅನುದಿನ ಜೀವನದಲ್ಲಿ ಬಳಕೆಗೆ ತರಲು ಸಾಧ್ಯವಿತ್ತು ಎಂದು ನೋಡುವೆವು. ಅಂತಹ ರಾಜನ ಜೀವನದೊಂದಿಗೆ ಹೋಲಿಸಿ ನೋಡಿದರೆ ನಮ್ಮದು ವಿರಾಮಜೀವನ. ಯಾವುದು ಅವನಿಗೆ ಸಾಧ್ಯವಾಗಿತ್ತೋ ಅದು ನಮಗೂ ಸಾಧ್ಯವಾಗಬೇಕು. ಅಸಾಧ್ಯವಾದುದನ್ನು ಉಪನಿಷತ್ತು ಬೋಧಿಸುವುದಿಲ್ಲ. ಜಗದ ಹವ್ಯಾಸವನ್ನು ಬಿಟ್ಟವರಿಗೆ ಮಾತ್ರ ಇದು ಮೀಸಲಲ್ಲ. ವೇದಾಂತ ನಿತ್ಯಜೀವನದಲ್ಲಿ ಎಲ್ಲರಿಗೂ ಸಹಾಯಕ್ಕೆ ಬರಬೇಕು. ಒಂದು ತತ್ತ್ವ ಪ್ರಯೋಜನಕ್ಕೆ ಬರುವ ಈ ಬಗೆಯ ಸಾಧ್ಯತೆ ಮತ್ತು ಪ್ರಯೋಜನವನ್ನು ಉಪನಿಷತ್ತುಗಳ ಸಂದೇಶದಲ್ಲಿ ನಾವು ನೋಡುತ್ತೇವೆ.

> ಉಪನಿಷತ್ತು ಶಕ್ತಿಯ ಗಣಿ. ಇಡೀ ಪ್ರಪಂಚವನ್ನು ಉಜ್ಜೀವನಗೊಳಿಸುವ ಶಕ್ತಿ ಅದರಲ್ಲಿ ಇದೆ. ಉಪನಿಷತ್ತಿನಿಂದ ಇಡೀ ಪ್ರಪಂಚವನ್ನು ಜಾಗೃತಗೊಳಿಸಬಹುದು; ಅದನ್ನು ಬಲಾಢ್ಯವಾಗಿ ಮಾಡಬಹುದು. ಶಕ್ತಿಯನ್ನು ತುಂಬಬಹುದು. ಅದು ತನ್ನ ತೂರ್ಯವಾಣಿಯಿಂದ ಇಡೀ ವಿಶ್ವದ, ಎಲ್ಲ ಜನಾಂಗದ, ಕೋಮಿನ, ಧರ್ಮದ, ದೀನರು, ದುಃಖಿಗಳು, ದಲಿತರಿಗೆ ತಮ್ಮ ಕಾಲ ಮೇಲೆ ನಿಂತು ಸ್ವತಂತ್ರರಾಗಿ ಎಂದು ಬೋಧಿಸುವುದು. ಸ್ವಾತಂತ್ರ್ಯ, ಶಾರೀರಿಕ ಸ್ವಾತಂತ್ರ್ಯ, ಮಾನಸಿಕ ಸ್ವಾತಂತ್ರ್ಯ, ಆಧ್ಯಾತ್ಮಿಕ ಸ್ವಾತಂತ್ರ್ಯ – ಇದೇ ಉಪನಿಷತ್ತಿನ ಪಲ್ಲವಿ.
>
> – *ಸ್ವಾಮಿ ವಿವೇಕಾನಂದ*

ಪೂಜ್ಯ ಸ್ವಾಮಿ ಸೋಮನಾಥಾನಂದಜಿ ಅವರು, ಕನ್ನಡದಲ್ಲಿ ರಾಮಕೃಷ್ಣ–ವಿವೇಕಾನಂದ ಸಾಹಿತ್ಯವನ್ನು ಪ್ರಚುರಪಡಿಸಿದ ವಂದನೀಯರು. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮೀಜಿಯವರ 'ಆಧ್ಯಾತ್ಮಿಕ ಜೀವನ ಇತ್ಯಾದಿ' ಎಂಬ ಗ್ರಂಥದ ಒಂದು ಲೇಖನದ ಕೆಲವು ಭಾಗಗಳು ಇವು.

### ಮಾನವಜೀವನವನ್ನು ಅನುಭವಿಸುವ ರಹಸ್ಯ

ಉಪನಿಷತ್ತುಗಳು ಮಾನವಜೀವನವನ್ನು ನಿಕೃಷ್ಟವಾಗಿ ಎಣಿಸುವುದಿಲ್ಲ, ಎಲ್ಲಿಯೂ ಮಾನವನನ್ನು ದೂರುವುದೂ ಇಲ್ಲ. ಮಾನವ ಎಂದರೆ ಸೃಷ್ಟಿವಿಕಾಸದ ಏಣಿಯಲ್ಲಿ ತುತ್ತತುದಿಯಲ್ಲಿ ಇರುವವನು. **ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ** ಎಂದು ಶ್ವೇತಾಶ್ವತರ ಉಪನಿಷತ್ತು ಮಾನವನನ್ನು ಸಂಬೋಧಿಸುವುದು. ಮಾನವರನ್ನು ಪಾಪಿಗಳೆಂದು ಕರೆಯುವುದೇ ಈಶ್ವರನಿಂದೆ. ನಾವು ಬ್ರಹ್ಮನಿಂದ ಬಂದವರು, ಅವನೆಡೆಗೆ ಹೊರಟವರು. ಸದ್ಯಕ್ಕೆ ಇರುವಾಗಲೂ ಅವನಲ್ಲೆ ಇರುವೆವು, ಆದರೆ ತತ್ಕಾಲಕ್ಕೆ ಮರೆತಿರುವೆವು. ಆ ಸ್ಥಿತಿಯನ್ನು ನಾವು ಸಾಧನೆಯಿಂದ ಜ್ಞಾಪಿಸಿಕೊಳ್ಳಬೇಕಾಗಿದೆ. ಆಶಿಷ್ಠ ದೃಢಿಷ್ಠ ಬಲಿಷ್ಠರಾಗಬೇಕೆಂದು ಉಪನಿಷತ್ತು ಹೇಳುವುದು. ಎಂತೋ ಹೇಗೋ ಕಾಲಯಾಪನೆ ಮಾಡುವುದಲ್ಲ. ಧೀರರಾಗಿ ಬಾಳಬೇಕು, ಸಾಹಸದಿಂದ ಬಾಳಬೇಕು, ಜೀವನವನ್ನು ಒಂದು ವರದಂತೆ ಸ್ವೀಕರಿಸಬೇಕು. ಇದೊಂದು ಶಾಪ ಎಂದು ಗೋಳಿಟ್ಟು ಒರಲುವ ಅಳುಮೋರೆಯ ಧರ್ಮವನ್ನು ಉಪನಿಷತ್ತುಗಳು ಬೋಧಿಸುವುದಿಲ್ಲ.

ಉಪನಿಷತ್ತು ಪ್ರಪಂಚವನ್ನು ಅನುಭವಿಸಬೇಡಿ ಎನ್ನುವುದಿಲ್ಲ, ಅನುಭವಿಸುವ ರಹಸ್ಯವನ್ನು ತಿಳಿದುಕೊಂಡು ಅನುಭವಿಸಿ ಎನ್ನುವುದು. ನಮಗೆಲ್ಲ ಅನುಭವಿಸಲು ಆಸೆ. ಆದರೆ ಅನುಭವಿಸುವ ರಹಸ್ಯವನ್ನು ಕಲಿಯಲು ನಮಗೆ ತಾಳ್ಮೆ ಇಲ್ಲ. ಶಬ್ದ ಸ್ಪರ್ಶ ರೂಪ ರಸ ಗಂಧಗಳು ನಮ್ಮನ್ನು ಕೈಬೀಸಿ ಕರೆಯುತ್ತಿವೆ. ತಕ್ಷಣ ಅವುಗಳ ಕರೆಗೆ ಗಮನಕೊಟ್ಟು ಅವುಗಳ ಹಿಂದೆ ಬೀಳುವೆವು. ಇದು ಹೇಗೆಂದರೆ,

ಈಜು ಬರದವನು ನೀರಿಗೆ ಬಿದ್ದಂತೆ ಆಗುವುದು, ನೊಣ ಹಲಸಿನ ಹಣ್ಣನ್ನು ತಿನ್ನಲು ಹೋಗಿ ಅಂಟಿನ ಮೇಲೆ ಕುಳಿತಂತೆ ಆಗುವುದು. ಅನಂತರ ದುಃಖಪಡುವೆವು. ಈ ಪ್ರಪಂಚದಲ್ಲಿ ಏನಿದೆಯೋ ಅದನ್ನೆಲ್ಲ ಭಗವಂತನಿಂದ ತುಂಬಿಬಿಡಿ ಎಂದು ಈಶಾವಾಸ್ಯ ಉಪನಿಷತ್ತು ಹೇಳುವುದು. ದೇವರನ್ನು ಜ್ಞಾಪಕದಲ್ಲಿಟ್ಟುಕೊಂಡು, ಇದೆಲ್ಲ ಅವನದೆಂಬ ಭಾವನೆಯಿಂದ ಪ್ರಪಂಚವನ್ನು ಆಸ್ವಾದಿಸಿದರೆ, ದುಃಖ ದುರಂತಗಳಿಗೆ ಕಾರಣವಾದ ಅಂಶಗಳು ನಮ್ಮ ಜೀವನವನ್ನು ಪ್ರವೇಶಿಸುವುದಿಲ್ಲ. ಎಂದು ಭಗವಂತನನ್ನು ಮರೆಯುವೆವೋ ಅಂದು ಅಮೃತವೂ ವಿಷವಾಗುವುದು, ಎಂದು ಅವನನ್ನು ಮರೆಯು ವುದಿಲ್ಲವೋ ಅಂದು ವಿಷವೂ ಅಮೃತವಾಗುವುದು. ಜೀವನದಲ್ಲಿ ಬಾಳುವುದೊಂದು ದೊಡ್ಡ ಕಲೆ. ನಾವು ಶಾಂತಿಯನ್ನು ಅನುಭವಿಸಿ, ಸುತ್ತಲೂ ಇರುವವರಿಗೆ ಶಾಂತಿ ನೀಡುವುದೇ ಜೀವನದ ಮುಖ್ಯ ಉದ್ದೇಶ. ಇದಕ್ಕೆ ನಾವು ಅಣಿಯಾಗಬೇಕು. ತರಬೇತಿ ಪಡೆದು ಕೊಳ್ಳಬೇಕು. ಸುಮ್ಮನೆ ಆತುರದಿಂದ ಧಾವಿಸಿದರೆ ಸಲ್ಲದ ಕಷ್ಟನಷ್ಟ ಗಳಿಗೆ ಒಳಗಾಗುವೆವು; ಆಗ ಜೀವನವನ್ನು ಹಳಿಯುವೆವು.

### ತುಂಬಿ ತುಳುಕಾಡುವ ಬಾಳು

ಈಶಾವಾಸ್ಯ ಉಪನಿಷತ್ತು ಬೋಧಿಸುವ ಮತ್ತೊಂದು ಅಮರ ಸತ್ಯವೇ 'ತ್ಯಾಗದಿಂದ ಅನುಭವಿಸು' ಎಂಬುದು. ಸಂಗ್ರಹಿಸು ವುದರಲ್ಲಿ ಆನಂದವಿದೆ. ಅದನ್ನು ಮತ್ತೊಬ್ಬರಿಗೆ ನೀಡುವುದರಲ್ಲಿ ಅದಕ್ಕಿಂತ ಮಿಗಿಲಾದ ಆನಂದವಿದೆ. ಭಗವಂತನು ನಮಗೆ ಏನನ್ನು ಕೊಟ್ಟಿರುವನೊ ಅದನ್ನು ಅವನ ಮಕ್ಕಳಿಗೆ ಕೊಟ್ಟು ಅನುಭವಿಸ ಬೇಕು. ನಾವು ಏನನ್ನು ಕೊಡುವೆವೋ ಅದು ನಮ್ಮ ಉದ್ಧಾರಕ್ಕೆ ಕಾದು ನಿಂತಿರುವುದು. ನಾವು ಕೊಟ್ಟದ್ದು ಹತ್ತಾಗಿ ನೂರಾಗಿ ಸಾವಿರವಾಗಿ ನಮ್ಮೆಡೆಗೆ ಬರುವುದು. ಸಂಗ್ರಹದಿಂದ ಬಂದ ಆನಂದ ಕ್ಷೀಣವಾಗುವುದು. ಎಂದು ನಾವು ಅದನ್ನು ಇತರರಿಗೆ ಕೊಡುವೆವೋ ಅಂದು ಅದು ವೃದ್ಧಿಯಾಗುವುದು.

"ಈ ಪ್ರಪಂಚದಲ್ಲಿ ಶಾಸ್ತ್ರವಿಹಿತವಾದ ಕರ್ಮಗಳನ್ನು ಮಾಡು ತ್ತಲೇ ನೂರು ವರ್ಷ ಜೀವಿಸಲು ಇಚ್ಛೆಪಡಬೇಕು" ಎಂದು ಉಪನಿಷತ್ತು ಹೇಳುವುದು. ಏಕಾದರೂ ಪ್ರಪಂಚಕ್ಕೆ ಬಂದೆನೋ, ಎಷ್ಟು ಬೇಗ ಇಲ್ಲಿಂದ ಹೋದರೆ ಅಷ್ಟು ಮೇಲು ಎಂಬ ಹೇಡಿಯ ಸೂತ್ರವನ್ನಲ್ಲ ಉಪನಿಷತ್ತು ಹೇಳುವುದು. ನಾವು ಪ್ರಪಂಚಕ್ಕೆ ಬಂದ ಮೇಲೆ ಪೂರ್ಣ ಆಯುಸ್ಸನ್ನು ಬಾಳಬೇಕು; ಓಡಿಹೋಗುವುದಲ್ಲ. ಬಾಳುತ್ತಿರುವಾಗ ಆ ಬಾಳೆಂಬುದು ಧಾರ್ಮಿಕ ಕರ್ಮಗಳಿಂದ ತುಂಬಿ ತುಳುಕಾಡುತ್ತಿರಬೇಕು. ಜೀವನವನ್ನು ಸ್ವಾರ್ಥಿಯಾಗಿ ಬಾಳು ವುದಲ್ಲ, ಸೋಮಾರಿಯಾಗಿ ಬಾಳುವುದಲ್ಲ. ದೇವರ ಪೀಠದ ಬಳಿ ಉರಿಯುತ್ತಿರುವ ಗಂಧದಕಡ್ಡಿ ಕ್ಷಣಕ್ಷಣಕ್ಕೂ ಕಡಮೆಯಾಗು ತ್ತಿದ್ದರೂ ತನ್ನ ಸುವಾಸನೆಯಿಂದ ವಾತಾವರಣವನ್ನೆಲ್ಲಾ ತುಂಬು ವಂತೆ, ಪ್ರೀತಿ ಮತ್ತು ಸೇವೆಯ ಪರಿಮಳದಿಂದ ತುಂಬಿ, ಬಾಳು ಸಂಪನ್ನವಾಗಬೇಕು ಎಂಬ ಉಪದೇಶವನ್ನು ನಾವು ಉಪನಿಷತ್ತು ಗಳಲ್ಲಿ ನೋಡುವೆವು.

### "ಇದು ವಿಧಿ, ಇದು ಉಪದೇಶ"

ಮುಕ್ತಿ ಎಂಬುದು ಬ್ರಾಹ್ಮೀಸ್ಥಿತಿ. ನಾವಿರುವಾಗ ಅದನ್ನು ಅನುಭವಿಸಬೇಕು. ಈಗಲ್ಲದೆ ಕಾಲವಾದ ಮೇಲೆ ಎಲ್ಲೋ ಸಿಕ್ಕಬಹುದಾದ ಲೋಕವನ್ನೋ ಸ್ಥಿತಿಯನ್ನೋ ಉಪನಿಷತ್ತು ಹೇಳುವುದಿಲ್ಲ. ಈಗ ಇಲ್ಲದುದು ಅನಂತರ ಬರಲಾರದು. ಅದು ಈಗ ಇದ್ದರೆ ಸತ್ಯ. ಇಲ್ಲದೆ ಇದ್ದರೆ ಅದನ್ನು ಸ್ವೀಕರಿಸಬೇಕಾಗಿಲ್ಲ. ಅಂತೆಕಂತೆಯ ಪುರಾಣದ ಮೇಲೆ ಉಪನಿಷತ್ತು ನಿಂತಿಲ್ಲ. ಅದು ವರ್ತಮಾನದ ಅನುಭವದ ಆಧಾರದ ಮೇಲೆ ನಿಂತಿದೆ. ಕೇನೋಪನಿಷತ್ತು ಹೀಗೆ ಹೇಳುತ್ತದೆ: "ಇಲ್ಲಿಯೆ ಅರಿತುಕೊಂಡರೆ ಸತ್ಯ ಉಂಟು. ಇಲ್ಲಿ ಅರಿತುಕೊಳ್ಳದಿದ್ದರೆ ದೊಡ್ಡ ವಿನಾಶವಾಗುತ್ತದೆ. ವಿವೇಕಿಗಳು ಸರ್ವಪ್ರಾಣಿಗಳಲ್ಲಿಯೂ ಆತ್ಮತತ್ತ್ವವನ್ನು ಅರಿತು ಕೊಂಡು ಈ ಲೋಕವನ್ನು ದಾಟಿಹೋಗಿ ಅಮರರಾಗುತ್ತಾರೆ. ಯಾವಾಗ ಪ್ರತಿಬೋಧದಲ್ಲಿಯೂ (ಪ್ರತಿ ಅನುಭವದಲ್ಲಿ, ಅರಿಯು ವಿಕೆಯಲ್ಲಿ) ಬ್ರಹ್ಮವು ತಿಳಿಯಲ್ಪಡುವುದೋ ಆಗ ನಿಜವಾಗಿ ತಿಳಿದಂತಾಗುವುದು." (*ಕೇನೋಪನಿಷತ್, ೨: ೪, ೫*)

ಅಧ್ಯಯನವನ್ನು ಪೂರೈಸಿಕೊಂಡು ಹೋಗುವ ವೇಳೆ ಬ್ರಹ್ಮಚಾರಿಗಳಿಗೆ ಗುರು ಮಾಡುವ ಬೋಧನೆ ಇಂದಿಗೂ ಅನುಕರಣೀಯವಾಗಿದೆ:

"ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು, ಅಧ್ಯಯನದಲ್ಲಿ ಪ್ರಮಾದ ಮಾಡಬೇಡ, ಆಚಾರ್ಯನಿಗೆ ಯೋಗ್ಯವಾದ ಧನವನ್ನು ಕೊಡು. ವಂಶವನ್ನು ನಿಲ್ಲಿಸಬೇಡ, ಸತ್ಯದಿಂದ ಕದಲಕೂಡದು, ಧರ್ಮದಿಂದ ಕದಲಕೂಡದು. ಸ್ವಾಧ್ಯಾಯ–ಪ್ರವಚನಗಳಿಂದ ಕದಲಕೂಡದು. ದೇವಪಿತೃಕಾರ್ಯಗಳಿಂದ ಕದಲಕೂಡದು, ತಾಯಿಯೇ ನಿನಗೆ ದೇವರಾಗಲಿ. ತಂದೆಯೇ ನಿನಗೆ ದೇವರಾಗಲಿ. ಆಚಾರ್ಯನೇ ನಿನಗೆ ದೇವರಾಗಲಿ. ಅತಿಥಿಯೇ ನಿನಗೆ ದೇವರಾಗಲಿ. ಯಾವ ಕರ್ಮಗಳು ನಿಂದನೀಯ ವಲ್ಲವೋ ಅವುಗಳನ್ನು ಮಾತ್ರ ಸೇವಿಸಬೇಕು. ಉಳಿದವುಗಳನ್ನು ಸೇವಿಸಕೂಡದು. ನಮ್ಮಲ್ಲಿ ಯಾವ ಒಳ್ಳೆಯ ನಡತೆಗಳಿವೆಯೋ ಅವನ್ನೇ ಸೇವಿಸಬೇಕು. ಉಳಿದವುಗಳನ್ನು ಸೇವಿಸಕೂಡದು. ನಮಗಿಂತ ಉತ್ತಮರಾದ ಯಾವ ಯಾವ ಬ್ರಾಹ್ಮಣರಿರುವರೊ ಅವರನ್ನು ಆಸನ ಮೊದಲಾದ ರೀತಿಗಳಿಂದ ಆದರಿಸಬೇಕು. ಶ್ರದ್ಧೆಯಿಂದ ಕೊಡಬೇಕು, ಅಶ್ರದ್ಧೆಯಿಂದ ಕೊಡಬಾರದು. ತನ್ನ ಐಶ್ವರ್ಯಕ್ಕೆ ತಕ್ಕಂತೆ ಕೊಡಬೇಕು, ಭಯದಿಂದ ಕೊಡಬೇಕು."

(*ತೈತ್ತಿರೀಯ ಉಪನಿಷತ್ತು, ಶೀಕ್ಷಾವಲ್ಲಿ* )

ಅಧ್ಯಯನ, ಪ್ರವಚನಗಳನ್ನು ಬಿಡಕೂಡದು, ಇದೇ ತಪಸ್ಸು ಎಂದು ಉಪನಿಷತ್ತು ಸಾರುವುದು. ಜ್ಞಾನಪ್ರವಾಹವು ವೃದ್ಧಿಯಾ ಗುತ್ತಿರಬೇಕಾದರೆ, ಅಖಂಡವಾಗಿ ಹರಿದು ಹೋಗುತ್ತಿರಬೇಕಾದರೆ, ಇವೆರಡೂ ಅವಶ್ಯಕ. ನಾವು ಅಧ್ಯಯನ ಮಾಡಬೇಕು, ವಿಷಯಗಳನ್ನು ತಿಳಿದುಕೊಳ್ಳಬೇಕು. ಇದಕ್ಕೆ ಒಂದು ಮಿತಿ ಇಲ್ಲ. ಶ್ರೀರಾಮಕೃಷ್ಣರು, "ನಾನು ಎಲ್ಲಿಯವರೆಗೆ ಬದುಕಿರುವೆನೊ ಅಲ್ಲಿಯವರೆಗೆ ಕಲಿಯು

ವೆನು" ಎಂದು ಹೇಳುತ್ತಿದ್ದರು. ಅಂತೆಯೇ ನಾವು ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೂ ಋಷಿಋಣವನ್ನು ತೀರಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮತ್ತಷ್ಟು ಆಳವಾಗಿ ತಿಳಿಯಲು ಪ್ರಯತ್ನಿಸಬೇಕು. ಹೀಗೆ ತಿಳಿದುಕೊಳ್ಳುತ್ತಿರುವಂತೆಯೇ ಅದನ್ನು ಇತರರಿಗೆ ವಿವರಿಸಬೇಕು. ಪಡೆಯುವುದು ಕೊಡುವುದಕ್ಕಾಗಿ. ಹಾಗೆ ಕೊಡುವಾಗ ಕೀರ್ತಿ, ಯಶಸ್ಸಿನ ಆಸೆಯನ್ನು ಬದಿಗೊತ್ತಿ, "ಮತ್ತೊಂದು ಹೃದಯಕ್ಕೆ ಜ್ಞಾನ ಪ್ರವೇಶಿಸುವುದಕ್ಕೆ ನಾನೊಂದು ಮಾಧ್ಯಮ ಮಾತ್ರ " ಎಂಬ ವಿನಯಭಾವ ಇರಬೇಕು.

### ಧೀರನ ಗಾಯತ್ರಿ

ಕಠೋಪನಿಷತ್ತಿನಲ್ಲಿ ಯಮ ನಚಿಕೇತನಿಗೆ ಹೀಗೆ ಹೇಳುತ್ತಾನೆ: **ಏಳಿರಿ, ಎಚ್ಚರಗೊಳ್ಳಿ, ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ತಿಳಿದುಕೊಳ್ಳಿರಿ. ಹರಿತವಾದ ಕತ್ತಿಯ ಅಲಗು ದಾಟಲು ಕಷ್ಟವಾಗಿರುವಂತೆ ಆ ಪಥವು ದುರ್ಗಮವೆಂದು ಜ್ಞಾನಿಗಳು ಹೇಳುತ್ತಾರೆ** (೧.೩.೧೪). ನಾವು ಜಾಗೃತರಾಗಬೇಕು, ನಾಮ ರೂಪಗಳ ಮಿಥ್ಯಾಮೋಹದ ನಿದ್ರೆಯಿಂದ ಕಣ್ಣು ಹೊಸಕಿಕೊಂಡು ಏಳಬೇಕು. ಜ್ಞಾನಿಗಳ ಬಳಿಗೆ ಹೋಗಿ ಬ್ರಾಹ್ಮೀಸ್ಥಿತಿಗೆ ಮಾರ್ಗವನ್ನು ಅರಿತುಕೊಳ್ಳಬೇಕು.

ಆ ಮಾರ್ಗ ಕತ್ತಿಯ ಅಲಗಿನಂತೆ ದಾಟಲು ಕಷ್ಟ ಆದರೆ ಜೀವನದಲ್ಲಿ ಯಾವ ಸಾಹಸಕ್ಕೂ ಕೈಹಾಕದೆ ಇದ್ದರೂ ಬಾಳು ಒಂದಲ್ಲ ಒಂದು ದಿನ ಮೃತ್ಯುವಿನ ಕೈವಶವಾಗುವುದು ಖಂಡಿತ. ಸಾವು ನಿಶ್ಚಯವಾಗಿರುವಾಗ ಸತ್ಯಕ್ಕೆ ಹೋರಾಡಿ. ಅದನ್ನು ಪಡೆಯಲು ಮಾಡಿದ ಪ್ರಯತ್ನದಲ್ಲಿ ಮರಣೋನ್ಮುಖರಾಗುವುದರಲ್ಲಿಯೂ ಒಂದು ಆನಂದವಿದೆ. **ಇಂತಹ ಧೀರನ ಗಾಯತ್ರಿಯೇ ಉಪನಿಷತ್ತಿನ ಬೋಧನೆಯ ಪಲ್ಲವಿ.**

## ವಾಲ್ಟೇರ್ ಹೇಳಿದ ಬ್ರಾಹ್ಮಣನ ಕತೆ

(ವಾಲ್ಟೇರ್ ಫ್ರಾನ್ಸ್‌ನ ಒಬ್ಬ ಪ್ರಮುಖ ತತ್ತ್ವಶಾಸ್ತ್ರಜ್ಞ)

ಉತ್ತಮ ಬ್ರಾಹ್ಮಣನೊಬ್ಬ "ನಾನು ಹುಟ್ಟದೇ ಇದ್ದಿದ್ದರೆ ಚೆನ್ನಾಗಿತ್ತು ಎಂದು ಅನ್ನಿಸುತ್ತದೆ" ಎಂದ. "ಯಾಕೆ ಹಾಗೆ?" ಎಂದೆ ನಾನು. ಆತ ಉತ್ತರಿಸಿದ, "ಏಕೆಂದರೆ ನಾನು ನಲವತ್ತು ವರ್ಷದಿಂದ ಅಧ್ಯಯನ ಮಾಡುತ್ತಿರುವೆ. ಇಷ್ಟು ವರ್ಷಗಳೂ ವ್ಯರ್ಥ ಅನ್ನಿಸುತ್ತಿದೆ.... ನಾನು ಜಡವಸ್ತುವಿನಿಂದ ಮಾಡಲ್ಪಟ್ಟಿದ್ದೇನೆ ಎಂದು ನಂಬಿದ್ದೇನೆ. ಆದರೆ ಯಾವುದರಿಂದ ಆಲೋಚನೆಗಳು ಹುಟ್ಟುತ್ತವೋ ಅದೇನು ಎಂದು ನನಗೆ ತೃಪ್ತಿಕರವಾಗಿ ಇನ್ನೂ ತಿಳಿಯಲಾಗಿಲ್ಲ. ಆಹಾರ ಅರಗುವ ತರಹ ನನ್ನ ಅರಿವೂ ಒಂದು ಸರಳವಾದ ಕ್ರಿಯೆಯಾಗಿ ನಡೆಯುತ್ತಿದೆಯೇ ಎಂಬುದರ ಬಗೆಗೂ ನಾನು ಅಜ್ಞಾನಿಯಾಗಿದ್ದೇನೆ. ಅಥವಾ ನನ್ನ ಕೈಯಲ್ಲಿ ವಸ್ತುವೊಂದನ್ನು ಹಿಡಿದುಕೊಳ್ಳುವ ರೀತಿಯಲ್ಲೇ ನನ್ನ ತಲೆಯಲ್ಲಿಯೂ ಆಲೋಚಿಸುತ್ತಿದ್ದೇನೆಯೋ ಎಂದೂ ತಿಳಿಯಲಾರೆ... ನಾನು ವಿಪರೀತ ಮಾತನಾಡುತ್ತೇನೆ; ಅನಂತರ ಮಾತು ಮುಗಿಸಿದ ಮೇಲೆ ನನಗೇ ಗಲಿಬಿಲಿಯಾಗಿ, ನಾನು ಹೇಳಿದ್ದರ ಬಗೆಗೆ ನಾನೇ ನಾಚಿಕೆ ಪಡುತ್ತಿರುತ್ತೇನೆ!"

**ವಾಲ್ಟೇರ್ ಅನಂತರ ತಾನು ಆ ಬ್ರಾಹ್ಮಣನ ಪಕ್ಕದ ಮನೆಯ ಅಜ್ಜಿಯ ಜತೆ ಮಾತನಾಡಿದುದನ್ನು ಹೇಳುತ್ತಾನೆ :**

"ನಿನ್ನ ಆತ್ಮ ಯಾವುದರಿಂದ ಆಗಿದೆ ಎಂದು ತಿಳಿಯದೆ ಇರುವುದರಿಂದ ಬೇಸರಪಡುತ್ತಿದ್ದೀಯಾ?" ಎಂದು ಅಜ್ಜಿಗೆ ಕೇಳಿದೆ. ಅವಳಿಗೆ ನನ್ನ ಪ್ರಶ್ನೆಯೇ ಅರ್ಥವಾಗಲಿಲ್ಲ. ತನ್ನ ಸುದೀರ್ಘ ಜೀವನದಲ್ಲಿ ಆಕೆ ಒಂದು ಕ್ಷಣವೂ ಕೂಡ ತನ್ನ ನೆರೆಮನೆಯ ಬ್ರಾಹ್ಮಣ ತುಂಬ ಚಿಂತೆಗೀಡಾದ ಈ ವಿಷಯಗಳ ಬಗ್ಗೆ ಯೋಚಿಸಿದವಳಲ್ಲ. ತನ್ನ ಹೃದಯದಾಳದಲ್ಲಿ ದೇವರ ವಿವಿಧ ಅವತಾರಗಳ ಬಗ್ಗೆ ಗಾಢವಾದ ನಂಬಿಕೆ ಇದ್ದ ಅವಳು, ಶುದ್ಧಿಗಾಗಿ ಗಂಗಾಜಲ ಸಿಕ್ಕುವಂತಿದ್ದರೆ ತಾನು ಅತ್ಯಂತ ಸುಖಿ ಎಂದು ಭಾವಿಸುವವಳು.

ಈಕೆಯ ಆನಂದದಿಂದ ವಿಚಲಿತನಾಗಿ, ನನ್ನ ತತ್ತ್ವಜ್ಞಾನಿಯ ಬಳಿಗೆ ಹೋಗಿ ಹೀಗೆಂದೆ: "ನಿನ್ನ ಮನೆಯ ಪಕ್ಕದಲ್ಲೆ ಏನೇನೂ ಯೋಚನೆ ಮಾಡದ ಒಬ್ಬಳು ಮುದುಕಿ ಅತ್ಯಂತ ಸಂತೃಪ್ತಿಯಿಂದ ಬದುಕುತ್ತಿರುವಾಗ, ನೀನು ಇಷ್ಟೊಂದು ಸಂಕಟದಲ್ಲಿರುವುದಕ್ಕೆ ನಾಚಿಕೆಯಾಗುವುದಿಲ್ಲವೆ?"

ಅದಕ್ಕೆ ಆತ ಉತ್ತರಿಸಿದ : "ನೀನೆಂದದ್ದು ಸರಿ. ನನ್ನ ಪಕ್ಕದ ಮನೆಯ ಅಜ್ಜಿಯಂತೆ ಅಜ್ಞಾನಿಯಾಗಿ ಸುಖಿಯಾಗಿರಬೇಕು ಎಂದು ನನಗೇ ನಾನು ಅನೇಕ ಸಲ ಅಂದುಕೊಂಡಿದ್ದೇನೆ. ಆದಾಗ್ಯೂ ಈ ಸಂಕಟವೇ ವಾಸಿ; ಅಂತಹ ಸುಖವನ್ನು ನಾನು ಬಯಸುವುದಿಲ್ಲ." ವಾಲ್ಟೇರ್ ಕತೆ ಮುಗಿಸುತ್ತ ಹೀಗೆನ್ನುತ್ತಾನೆ : **ಬ್ರಾಹ್ಮಣನ ಈ ಉತ್ತರ ನನ್ನ ಅನುಭವಗಳಲ್ಲೆಲ್ಲ ಅತ್ಯಂತ ಪ್ರಭಾವ ಬೀರಿದ ಅನುಭವ.**

**(ಸಂಗ್ರಹ: *ಡಾ. ಎಚ್. ಪಾಂಡುರಂಗ ವಿಠಲ*)**